


International Journal of Kannada Research
www.kannadajournal.com

**ISSN: 2454–5813**
IJKR 2020; 6(3): 160-164
© 2020 IJKR
www.kannadajournal.com
Received: 22-05-2020
Accepted: 24-06-2020

**ಡಾ. ಕೃಷ್ಣೋಜಿರಾವ್ ಟಿ.ಎಂ**
ಇಂಗ್ಲಿಷ್ ಸಾಹಿತ್ಯ ಚರಿತ್ರೆ,
ಶೇಷಗಿರಿರಾವ್.ಎಲ್.ಎಸ್.,ಸಪ್ನ
ಬುಕ್ ಹೌಸ್, ಬೆಂಗಳೂರು

**Corresponding Author:**
**ಡಾ. ಕೃಷ್ಣೋಜಿರಾವ್ ಟಿ.ಎಂ**
ಇಂಗ್ಲಿಷ್ ಸಾಹಿತ್ಯ ಚರಿತ್ರೆ,
ಶೇಷಗಿರಿರಾವ್.ಎಲ್.ಎಸ್.,ಸಪ್ನ
ಬುಕ್ ಹೌಸ್, ಬೆಂಗಳೂರು

# ಡೈಡೋರಾಣಿ ಮತ್ತು ಲ್ಯಾಮಿಯರೊಡನೆ ಈನಿಯಸ್‌ನ ಪ್ರೇಮ

**ಡಾ. ಕೃಷ್ಣೋಜಿರಾವ್ ಟಿ.ಎಂ**

ರಾಣಿ ಡೈಡೋಳ ಅರಮನೆಯಲ್ಲಿ ಅತಿಥಿಯಾಗಿದ್ದ ಈನಿಯಸ್‌ನ ಮೇಲೆ ಅವಳಿಗೆ ಎಲ್ಲಿಲ್ಲದ ಪ್ರೇಮವುಂಟಾಗುತ್ತದೆ. ಆಗ ಅವಳು ವಿರಹ ವೇದನೆಯಿಂದ ಒದ್ದಾಡ ತೊಡಗುತ್ತಾಳೆ, ಅವನನ್ನು ಬಿಟ್ಟಿರಲಾರದ ಸ್ಥಿತಿಯನ್ನು ತಲುಪುತ್ತಾಳೆ.

ಬೆಳಗಾದ ಕೂಡಲೆ ಡೈಡೋರಾಣಿ ತನ್ನ ಸೋದರಿಯಾದ 'ಅನಾಳ'ನ್ನು ಕಂಡು ತನ್ನ ಮನದ ಪ್ರೀತಿ, ವೇದನೆಯನ್ನು ತೋಡಿಕೊಂಡಳು. ತನ್ನ ಮೊದಲ ಗಂಡ ಸತ್ತ ಮೇಲೆ ಬೇರೆ ಯಾರನ್ನು ಮದುವೆ ಆಗುವುದಿಲ್ಲವೆಂದು ಶಪಥ ಮಾಡಿದವಳು, ಇಂದು ಈನಿಯಸ್‌ನನ್ನು ಮದುವೆಯಾಗಲೇಬೇಕೆಂದು ಹಠ ಹಿಡಿದಿರುವುದನ್ನು ತಿಳಿಸಿದಳು. ಜೊತೆಗೆ ಇದರಿಂದ ತನ್ನ ಗಂಡನಿಗೆ ದ್ರೋಹ ಮಾಡುತ್ತಿದ್ದೇನೇನೋ ಎಂಬ ವೇದನೆಯ ಇಬ್ಬದಿಯಲ್ಲಿ ಸಿಲುಕಿ ಸಾವಾದರೂ ಬರಬಾರದೆ, ಎಂದು ಗೋಳಾಡುತ್ತಾಳೆ ಆದರೆ ಅವಳ ಗಂಡ ಸತ್ತು ಎಷ್ಟೋ ವರ್ಷಗಳು ಕಳೆದಿದ್ದರು ಅವನ ನೆನಪಲ್ಲೇ ಉಳಿದಿರುತ್ತಾಳೆ. ಯಾವಾಗ ಈನಿಯಸ್ ನನ್ನು ನೋಡಿದಾಕ್ಷಣ ಪ್ರೇಮಾಂಕುರವಾಗಿರುತ್ತದೆ.

ಆಗ ಅವಳ ಸೋದರಿ ಅನಳಾಳು ಅವಳನ್ನು ಸಮಾಧಾನ ಮಾಡಿ ನೀನಿನ್ನು ಚಿಕ್ಕ ಪ್ರಾಯದವಳು, ನಿನ್ನ ಯೌವ್ವನವನ್ನು ಯಾಕೆ ಹಾಳು ಮಾಡಿ ಕೊಳ್ಳುತ್ತೀಯ, 'ಎಂದೋ ಸತ್ತ ನಿನ್ನ ಗಂಡನನ್ನು ನೆನಪಿಸಿಕೊಂಡು ಅಳುತ್ತಾ ನಿನ್ನ ಜೀವನ ಹಾಳು ಮಾಡಿಕೊಳ್ಳುವುದಕ್ಕಿಂತ ನೀನು ಇಷ್ಟಪಟ್ಟ ಈನಿಯಸ್‌ನನ್ನು ಮದುವೆ ಮಾಡಿಕೊಂಡು ಹೊಸ ಜೀವನ ಮಾಡುವುದೇ ಸರಿ', ನೀವಿಬ್ಬರು ಸೇರಿದರೆ ಬಲಿಷ್ಟರಾಷ್ಟ್ರವನ್ನು ಕಟ್ಟಬಹುದು ಶತ್ರುಗಳೆಲ್ಲ ಹೆದರುತ್ತಾರೆ ಎಂದಳು. ಇದರಿಂದ ಡೈಡೋಳ ಪ್ರೇಮ ಮತ್ತಷ್ಟು ಹೆಚ್ಚಾಯಿತು. ಮುಂದೆ ತನ್ನ ಪ್ರೇಮ ಫಲಿಸಲಿ ಎಂದು ನಾನಾ ದೇವರಲ್ಲಿ ಹರಕೆ ಹೊತ್ತು ಎಲ್ಲಾ ದೇವಾಲಯಗಳಿಗೂ ಅಲೆಯುತ್ತ ಪ್ರಾಣಿ ಬಲಿ ಕೊಟ್ಟು ಬರುತ್ತಿದ್ದಳು. ವೈವಾಹಿಕ ಸಂಬಂಧ ಕೂಡಿಸುವ 'ಜೂನೋ' ದೇವತೆಯನ್ನು ವಿಶೇಷವಾಗಿ ಪೂಜಿಸತೊಡಗಿದಳು.

ತನ್ನ ಜೊತೆಗೆ ಈನಿಯಸ್‌ನನ್ನು ಕರೆದುಕೊಂಡು ತನ್ನ ರಾಜ್ಯದ ಊರುಗಳನ್ನು ಸುತ್ತಿಸಿ ತನ್ನ ಶ್ರೀಮಂತಿಕೆಯನ್ನು ತೋರಿಸಿದಳು. ಈ ಮಧ್ಯೆ ಎಷ್ಟು ಬಾರಿ ತನ್ನ ಪ್ರೇಮವನ್ನು ಹೇಳಿಕೊಳ್ಳಬೇಕು ಎಂದುಕೊಂಡರೂ ಅವಳಿಂದ ಸಾಧ್ಯವಾಗಲೇ ಇಲ್ಲ.

ದಿನಾ ರಾತ್ರಿ ಟ್ರೋಜನ್ನರಿಗೆ ಊಟವನ್ನು ಏರ್ಪಡಿಸಿ ಮತ್ತೆ ಮತ್ತೆ ಈನಿಯಸ್‌ನ ಕತೆಯನ್ನು ಕೇಳುತ್ತಾ, ಅವನ ದೇಹ ಸೌಂದರ್ಯವನ್ನು ನೋಡುತ್ತಾ ಆನಂದಿಸುತ್ತಿದ್ದಳು. ಅವನು ಹೊರಟ ಮೇಲೆ ಅವನು ಕುಳಿತ ಪೀಠದ ಮೇಲೆ ಇವಳೂ ಕುಳಿತು ಖುಷಿ ಪಡುತ್ತಿದ್ದಳು. ರಾತ್ರಿ ಪೂರ್ತಿ ವಿರಹ ವೇದನೆಯಿಂದ ಒದ್ದಾಡುತ್ತಾ ನಿದ್ರೆ ಬರದೆ ಅರಮನೆ ಒಳಗೆ ಏಕಾಂಗಿಯಾಗಿ ಓಡಾಡುತ್ತಿದ್ದಳು. ಹೀಗೆ ಪ್ರೇಮ ತಾಪದಿಂದ ಹುಚ್ಚಾದ ಡೈಡೋಳು ಎಲ್ಲದರಲ್ಲೂ ಆಸಕ್ತಿ ಕಳೆದುಕೊಂಡಳು.

ಆಗ ಜೂನೋ ದೇವತೆ ವೀನಸ್ ದೇವತೆಗೆ ಕೃತಜ್ಞತೆ ಹೇಳುತ್ತಾಳೆ. ಕಾರ್ಥೇಜ ನಗರದಲ್ಲಿ ಡೈಡೋ ಮತ್ತು ಈನಿಯಸ್ ದಂಪತಿ ಗಳಾಗಿ ಸುಖವಾಗಿ ಜೀವಿಸಲಿ ಈ ನಗರ ನನಗೆ ಅತ್ಯಂತ ಪ್ರಿಯವಾದ ನಗರ, ಈ ಕಾರ್ಥೇಜವನ್ನು ಡೈಡೋರಾಣಿ ಈನಿಯಸ್‌ನಿಗೆ ವರದಕ್ಷಿಣೆಯಾಗಿ ಕೊಡಲಿ. ಟ್ರೋಜೋನ್ನರು ಇಲ್ಲೇ ಶಾಂತಿಯಿಂದ ನೆಲೆಸಲಿ ಎನ್ನುತ್ತಾಳೆ.

ಈನಿಯಸ್ ಇಟಲಿ ದೇಶಕ್ಕೆ ಹೋಗುವುದು ತಪ್ಪಿ ಇಲ್ಲಿಯೇ ಇರಲಿ ಎಂಬುದು ಜೂನೋ ದೇವತೆಯ ಆಸೆ ಎಂದು ವೀನಸ್ ದೇವತೆಗೆ ಅರ್ಥವಾಗುತ್ತದೆ. ನೀನು ಹೇಳಿದಂತೆ ಆಗಲಿ ನಿನ್ನನ್ನು ಎದುರು ಹಾಕಿಕೊಂಡು ಬದುಕುವವರಾದರೂ ಯಾರು? ಆದರೂ ದೇವತೆಗಳ ಮಹಾ ದೇವನಾದ ಜ್ಯುಪಿಟರ್ ಏನು ಹೇಳುತ್ತಾನೋ ಕೇಳುತ್ತೇನೆ ಎನ್ನುತ್ತಾಳೆ. ಮುಂದೆ ಡೈಡೋರಾಣಿ ಮತ್ತು ಈನಿಯಸ್ ಇಬ್ಬರೂ ಪರಿವಾರದವರೂ ಬೇಟೆಗೆ ಹೋಗುತ್ತಾರೆ.

ಆಗ ದೇವತೆಗಳ ಕುತಂತ್ರದಿಂದ ಮೋಡಕವಿದು ಆಲಿಕಲ್ಲು ಮಳೆ ಬೀಳುತ್ತದೆ. ಪರಿವಾರದವರು ಚದುರಿಹೋಗಿ ಡೈಡೋರಾಣಿ ಮತ್ತು ಈನಿಯಸ್ ಒಂದೇ ಗುಹೆಯಲ್ಲಿ ಉಳಿಯುತ್ತಾರೆ. ಮತ್ತೆ ಇಬ್ಬರೂ ದೈಹಿಕವಾಗಿ ಒಂದುಗೂಡುತ್ತಾರೆ. ಅದೇ ಅವರ ಅಧಿಕೃತ ಮದುವೆಯೂ ಆಗುತ್ತದೆ. ಇಬ್ಬರೂ ಪರಸ್ಪರ ಗಾಢವಾಗಿ ಪ್ರೇಮಿಸುತ್ತಿರುತ್ತಾರೆ. ಇವರಿಬ್ಬರಲ್ಲಿ ಈ ರೀತಿ ಪ್ರೀತಿ ಮೂಡಿಸಿದ್ದೇ ಜೂನೋ ದೇವತೆ ಮತ್ತು ಭೂದೇವಿಯರು.

ಪ್ರೇಮಿಗಳ ಈ ವಿವಾಹ ಬಾಹಿರ ಸಂಬಂಧವನ್ನು ಭೂದೇವಿಯ ಮಗಳಾದ ಸುದ್ದಿ ದೇವತೆಯು ಆಫ್ರಿಕಾ ಖಂಡದ ಎಲ್ಲಾ ನಗರಗಳಿಗೂ ಹಬ್ಬಿಸಿ ಬರುತ್ತಾಳೆ. ನಡೆದುದು, ನಡೆಯದುದ್ದದು ಎಲ್ಲವನ್ನು ಇಲ್ಲಸಲ್ಲದ ಹಾಗೆ ಹೇಳಿ ಬಂದಿರುತ್ತಾಳೆ. ಇವರಿಬ್ಬರು ತಮ್ಮ ಕರ್ತವ್ಯ ಮರೆತು ಹೀಗೆ ಈ ಚಳಿಗಾಲದಲ್ಲಿ ದೈಹಿಕ ತೃಪ್ತಿ, ಲೈಂಗಿಕ ತೃಪ್ತಿಯಲ್ಲಿರುವುದು

ಎಷ್ಟು ಸರಿ ?, ಎಂಬ ನ್ಯಾಯವನ್ನು ನಗರದಲ್ಲೆಲ್ಲ ಹಬ್ಬಿಸುತ್ತಾಳೆ.

ಟ್ರೋಜನ್‌ನ ರಾಜ ಈನಿಯಡ್ ಕಾರ್ಥೇಜದ ರಾಣಿ ಡೈಡೋ ಪರಸ್ಪರ ಪ್ರೀತಿಸಿ ಮದುವೆಯಾಗುತ್ತಾರಂತೆ !, ಇನ್ನು ಈ ರಾಜ್ಯದ ಪಾಡು ನಾಯಿ ಪಾಡು, ರಾಜ ಕಾಯಕ ಬಿಟ್ಟು ಸುಖದ ಸುಪ್ಪತ್ತಿಗೆಯಲ್ಲಿ ಸುಖಿಸುತ್ತಾರೆ ಎಂದು ಪ್ರಚಾರ ಮಾಡಿದಳು. ಈ ಸುದ್ಧಿಯು ಡೈಡೋ ರಾಣಿಯನ್ನು ಮದುವೆಯಾಗಬೇಕೆಂದಿಂದ ಲಿಬ್ಯಾದ ರಾಜ ಈಯರ್‌ಬಾಸನ ಕಿವಿಗೂ ಬಿದ್ದು ಕೋಪಗೊಳ್ಳುತ್ತಾನೆ. ಅವನ ದೇವತೆಗೆ ದೂರು ಹೇಳುತ್ತಾನೆ.

ಇತ್ತ ಜೋವ್ ದೇವತೆಯು ಇವರ ಪ್ರಣಯವನ್ನು ತಿಳಿದು ಮರ್ಕ್ಯುರಿ ದೇವತೆಯನ್ನು ಕಳುಹಿಸಿ ಈನಿಯಸ್‌ನು ಕೂಡಲೇ ಈ ಪ್ರೇಮವನ್ನು ನಿಲ್ಲಿಸಿ ಇಟಲಿ ದೇಶದಲ್ಲಿ ರಾಜ್ಯ ಕಟ್ಟುವತ್ತ ಕಾರ್ಯಪ್ರವೃತ್ತ ನಾಗಬೇಕೆಂದು ತಿಳಿಸಲು ಹೇಳುತ್ತಾನೆ. ಆಗ ಈನಿಯಸ್ ನೀನು ಹೆಣ್ಣೊಬ್ಬಳ ಕೈಗೊಂಬೆಯಾಗಿ ಅಧಃಪತನಕ್ಕೆ ಹೋಗಿಬಿದ್ದಿದ್ದೀಯ ಅವಳನ್ನು ಬಿಟ್ಟು ಈಗಿಂದೀಗಲೇ ಇಟಲಿಯತ್ತ ಪ್ರಯಾಣ ಬೆಳೆಸು ಇದು ದೈವಾಜ್ಞೆ ಎನ್ನುತ್ತಾಳೆ.

ಅದುವರೆಗೂ ಸುಖದ ಸಾಗರದಲ್ಲಿ ಮುಳುಗಿದ್ದ ಈನಿಯಸ್‌ನಿಗೆ ಏನು ಮಾಡ ಬೇಕೆಂದು ತೋಚಲಿಲ್ಲ, ಅವನೂ ಡೈಡೋಳನ್ನು ಗಾಢವಾಗಿ ಪ್ರೀತಿಸಿದ್ದನು. ಅವಳನ್ನು ಬಿಟ್ಟು ಹೋಗಲು ಅವನಿಂದಲೂ ಸಾಧ್ಯವಾಗುತ್ತಿಲ್ಲ. ಇಲ್ಲಿಂದ ಹೇಗೆ ಓಡಿ ಹೋಗುವುದು, ಪ್ರೇಮೋನ್ಮತ್ತಳಾದ ಡೈಡೋ ರಾಣಿಯನ್ನು ಹೇಗೆ ಎದುರಿಸುವುದು. ಎಂದು ನೂರಾರು ರೀತಿ ಯೋಚಿಸಿ ಕೊನೆಗೆ ಮೆಲ್ಲಗೆ ತನ್ನ ಸೈನಿಕರನ್ನು, ಸ್ನೇಹಿತರನ್ನು ಎಬ್ಬಿಸಿ ರಾತ್ರೋರಾತ್ರಿ ಕದ್ದುಹೋಗಲು ತೀರ್ಮಾನಿಸಿದನು.

ಆದರೆ ಇವನ ಈ ಪ್ರಯಾಣವನ್ನು ಡೈಡೋಳಿಗೆ ಆ ಸುದ್ದಿ ದೇವತೆಯೇ ತಿಳಿಸಿದ್ದಳು. ಅವಳು ದಿಗ್ಭ್ರಮೆಗೊಂಡು ಹುಚ್ಚಿಯಂತೆ ನಗರದ ಬೀದಿ ಬೀದಿಗಳಲ್ಲಿ ಅಲೆದಾಡಿ ಈನಿಯಸ್‌ನನ್ನು ಹಿಡಿದು ತನಗೆ ಮೋಸ ಮಾಡಿ ಈ ರೀತಿ ಹೋಗಬೇಡ, 'ನಿನ್ನನ್ನು ಬಿಟ್ಟು ನಾನು ಬದುಕಿರಲಾರೆ,' ಎಂದು ಅಂಗಲಾಚಿ ಬೇಡಿದಳು. ನೀನು ಅತ್ತ ಹೋದಕೂಡಲೆ ನಾನು ಇತ್ತ ಸಾಯುತ್ತೇನೆ ಎಂದು ಗೊತ್ತಿದ್ದರೂ ನೀನು ನನ್ನ ಬಿಟ್ಟು ಹೋಗುವುದು ಸರಿಯೇ ?, ನನ್ನ ಪ್ರೇಮ ನಿನಗೆ ಹಿಡಿಸಲಿಲ್ಲವೇ?, ನಾನು ನಿನ್ನನ್ನು ಮದುವೆಯಾಗಿ ನಿನಗೇನಾದರು ತೊಂದರೆ ಕೊಟ್ಟಿದ್ದೇನೆಯೇ,

ನಿನಗೆ ಸುಖ ಕೊಡಲಿಲ್ಲವೇ ನಾನು?, ನಿನ್ನ ಕೈಹಿಡಿದು ಬೇಡಿಕೊಳ್ಳುತ್ತೇನೆ, ನಿನ್ನ ಮನಸ್ಸು ಬದಲಿಸಿ ಇಲ್ಲಿಯೇ ಇರು; ಈಗ ನಿನ್ನಿಂದ ನನಗೆ ಮಾನ ಹಾನಿಯಾಗಿದೆ. ಈ ದೇಶದ ಜನ ಈಗ ನನ್ನನ್ನು ದ್ವೇಷಿಸುತ್ತಿದ್ದಾರೆ. ಈಗ ನನ್ನ ಅಣ್ಣ ಪಿಗ್ಮೇಲಿಯನ್ ಇಲ್ಲಿಗೆ ಬಂದು ಕೋಟೆ ವಶಪಡಿಸಿಕೊಂಡು ನಾಶಮಾಡುತ್ತಾನೆ. ನನ್ನನ್ನು ಮದುವೆಯಾಗ ಬಯಸಿರುವ ಈಯರ್‌ಬಾಸನು ನನ್ನ ಸೆರೆಹಿಡಿದು ಭೋಗಿಸುತ್ತಾನೆ. ನಿನ್ನಿಂದ ನನಗೊಂದು ಮಗುವಾದರೂ ಆಗಿದ್ದರೆ ಅವನ ಜೊತೆ ಸಂತೋಷದಿಂದ ಇರುತ್ತಿದ್ದೆ. ಎಂದು ದುಃಖಿಸತೊಡಗಿದಳು. ಇದಕ್ಕೆ ಈನಿಯಸ್‌ನು ಅವಳನ್ನು ಸಮಾಧಾನ ಪಡಿಸುತ್ತಾ ನಮ್ಮಿಬ್ಬರ ಪ್ರೇಮ ಪರಸ್ಪರ ಒಪ್ಪಿ ಆದುದಲ್ಲ ಬದಲಿಗೆ ದೇವತೆಗಳು ಮಾಡಿದ ಮಾಟದಿಂದ ಹೀಗಾಯಿತು.

ನಾನಿಲ್ಲಿಗೆ ಬಂದಿದ್ದು ಹೆಣ್ಣು ಹುಡುಕಿಕೊಂಡು ಮದುವೆಯಾಗಲಲ್ಲ ಬದಲಿಗೆ ಇಟಲಿ ಹುಡುಕಿ ರಾಜ್ಯಕಟ್ಟಲು ಬಂದದ್ದು, ಸ್ವಂತಃ ಅಪೋಲೋ ದೇವತೆಯೇ ನನಗೆ ಆಜ್ಞೆ ಮಾಡಿದ್ದಾನೆ ನಾನು ಹೋಗಲೇಬೇಕು ಎನ್ನುತ್ತಾನೆ. ಇದರಿಂದ ಕೋಪಗೊಂಡ ಡೈಡೋನಳು ಎಲಾ ದ್ರೋಹಿ, ಮೋಸಗಾರ, ನೀನು ಯಾವ ದೇವತೆಗಳ ಮಗನೂ ಅಲ್ಲ, ನೀನೊಬ್ಬ ಕಗ್ಗಲ್ಲು, ಹುಲಿಹಾಲು ಕುಡಿದು ಬೆಳೆದವನು, ನ್ಯಾಯ – ನೀತಿ, ಮನುಷ್ಯತ್ವ ಎಂಬುದೇ ನಿನಗೆ ಗೊತ್ತಿಲ್ಲ.

ನನಗೆ ಯಾವ ದೇವತೆಯು ಸಹಾಯ ಮಾಡುತ್ತಿಲ್ಲ ನಿನ್ನಂತಹವನ ಪರದೇಸಿಯ ಮೋಸಕ್ಕೆ ಬಲಿಯಾದ ನಾನು. ನನ್ನನ್ನು ಮೋಸ ಮಾಡಿದ ನಿನ್ನ ಹಡಗುಗಳು ಬಂಡೆಗೆ ಹೊಡೆದು ಪುಡಿಪುಡಿಯಾಗಲಿ, ಇದಕ್ಕೆ ತಕ್ಕ ಶಿಕ್ಷೆ ಅನುಭವಿಸುತ್ತೀಯ, ನನ್ನ ಹೆಸರು ಹೇಳಿಕೊಂಡು ನೀನು ಸಾಯುತ್ತೀಯೇ, ನಾನು ಸತ್ತ ಮೇಲೆ ನನ್ನ ಪಿಶಾಚಿ ನಿನ್ನನ್ನು ಅಟ್ಟಿಕೊಂಡು ಬಂದು ತಿನ್ನುತ್ತದೆ. ನನಗೆ ಮೋಸ ಮಾಡಿದ ನೀನು ನರಕ ಲೋಕದಲ್ಲಿ ನರಳಾಡುವುದನ್ನು ನಾನು ಅಲ್ಲಿಂದಲೇ ತಿಳಿಯುತ್ತೇನೆ ಎಂದು ಕಣ್ಣೀರು ಸುರಿಸುತ್ತಾ ಬಿರುಗಾಳಿಯಂತೆ ಅಲ್ಲಿಂದ ಹೋಗುತ್ತಾಳೆ.

ಅರಮನೆಯಲ್ಲಿ ಪ್ರಜ್ಞೆ ತಪ್ಪಿ ಬಿದ್ದ ಅವಳನ್ನು ಅವಳ ಸೇವಕಿಯರು ಸುಶ್ರೂಸೆ ಮಾಡುತ್ತಾರೆ. ಅವಳಿಗೆ ಸಮಾಧಾನ ಮಾಡಬೇಕೆಂದು ಈನಿಯಸ್ ಬಯಸಿದ್ದರೂ ದೇವತೆಗಳು ಅದಕ್ಕೆ ಅವಕಾಶ ಕೊಡದೆ ಅವನು ಅಲ್ಲಿಂದ ಹೋಗುವಂತೆ ಮಾಡುತ್ತವೆ. ದುಃಖದಿಂದಲೇ ಇವನು ತನ್ನ ಸೈನಿಕರ ಜೊತೆ ಇಟಲಿಯ ಕಡೆ ಹೋಗುತ್ತಾನೆ.

ಇತ್ತ ಎಚ್ಚೆತ್ತ ಡೈಡೋ ಉಪ್ಪರಿಗೆಯಿಂದ ಅವರು ಹೋಗುವುದನ್ನು ನೋಡಿ ನಿಟ್ಟುಸಿರು ಬಿಡುತ್ತಾಳೆ. ತನ್ನ ತಂಗಿಯನ್ನು ಕರೆದು ನನಗೋಸ್ಕರ ನೀನಾದರೂ ಈನಿಯಸ್‌ನನ್ನು

ಹೋಗಬೇಡ ಎಂದು ಬೇಡಿಕೊ, ನಾನೇನು ಅವನ ಶತ್ರುವಲ್ಲ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತೇನೆ, ಕೆಲವು ಗಂಟೆಗಳ ಕಾಲವಾದರು ತಡವಾಗಿ ಹೋದರೆ ಅವನ ಮುಖವನ್ನಾದರು ನೋಡಿ ಸಂತೋಷದಿಂದಿರುತ್ತೇನೆ. ನನ್ನ ನೊಂದ ಎದೆಗೆ ಸ್ವಲ್ಪ ಸಮಾಧಾನವಾದರು ಸಿಕ್ಕುತ್ತದೆ ಎನ್ನುತ್ತಾಳೆ.

ಇದು ನಿನ್ನಲ್ಲಿ ನನ್ನ ಕೊನೆ ಬೇಡಿಕೆ ನಾನು ಸತ್ತಾದರು ನಿನ್ನ ಋಣ ತೀರಿಸುತ್ತೇನೆ ಎನ್ನುತ್ತಾಳೆ. ಆದರೆ ಅವಳ ಈ ಪ್ರಾರ್ಥನೆ ಅವನ ಕಿವಿಗೆ ಬೀಳದಂತೆ ಜೋವ್ ದೇವತೆ ತಡೆದಿರುತ್ತಾಳೆ. ಕೊನೆಗೆ ಅವಳು ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸುತ್ತಾಳೆ. ಎಲ್ಲೆಲ್ಲೂ ಅವಳಿಗೆ ಅಪಶಕುನಗಳೇ ಕಾಣುತ್ತವೆ. ಅವಳ ಮೃತ ಪತಿ ಸಿಕೀಯಸನ ಧ್ವನಿ ಗೋರಿಯ ಒಳಗಿನಿಂದ ಅವಳನ್ನು ಕರೆದಂತೆ ಕೇಳಿಸುತ್ತಿತ್ತು. ಗೂಬೆ ಗೋಳಾಡಿದಂತೆ, ಕೋಪಿಷ್ಟ ಈನಿಯಸ್‌ನು ತನ್ನನ್ನು ಅಟ್ಟಿಸಿಕೊಂಡು ಬಂದಂತೆ ಹೀಗೆ ಏನೇನೋ ಕೆಟ್ಟಕನಸು ಬಂದು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ನಿರ್ಧರಿಸುತ್ತಾಳೆ.

ತನ್ನ ತಂಗಿ ಅನಾಳನ್ನು ಕರೆದು ಒಂದು ಚಿತೆಯನ್ನು ಏರ್ಪಡಿಸುವಂತೆ ಕೇಳಿಕೊಳ್ಳುತ್ತಾಳೆ. ಈನಿಯಸ್‌ನ ಶಸ್ತ್ರಾಸ್ತ್ರಗಳನ್ನು, ಅವನ ಉಡುಪುಗಳನ್ನು, ಅವಳು ಅವನ ಜೊ ತೆ ಮಲಗಿದ ಹಾಸಿಗೆಗಳನ್ನು ತಂದು ಚಿತೆಯ ಮೇಲಿರಿಸುತ್ತಾಳೆ. ಅವನ ನೆನಪು ಒಂದು ಉಳಿಯದಂತೆ ಸುಡಬೇಕೆಂದು ಪೂಜಾರಿಣಿ ಹೇಳಿದ್ದಾಳೆಂದು ತನ್ನ ತಂಗಿಗೆ ಸುಳ್ಳು ಹೇಳುತ್ತಾಳೆ. ಚಿತೆ ಸಿದ್ಧಮಾಡಿ ಬೆಂಕಿ ಹಚ್ಚುತ್ತಾರೆ. ಎಲ್ಲರೂ ನಿದ್ದೆ ಮಾಡುವ ವೇಳೆಯಲ್ಲಿ

ಡೈಡೋಳಿಗೆ ಏನು ಮಾಡಬೇಕೆಂದು ತಿಳಿಯದೆ ಹುಚ್ಚುಹಿಡಿದಂತಾಗುತ್ತದೆ. ಬೆಳಗಾಗುತ್ತಲೇ ಹಡಗುಗಳೆಲ್ಲ ಹೋಗಿದ್ದನ್ನು ನೋಡಿ ಇನ್ನೂ ದುಃಖಿತಳಾಗುತ್ತಾಳೆ.

ನನ್ನ ಈನಿಯಸ್‌ನಂತಹ ಸತ್ಯವಂತನು ಬೇರೆಲ್ಲೂ ಇಲ್ಲ, ತಂದೆಯನ್ನು ಹೆಗಲ ಮೇಲೆ ಹೊತ್ತು ತಿರುಗಿದವನು, ಧರ್ಮಾತ್ಮನು, ದೇವತೆಗಳಿಗೆ ಪ್ರಿಯವಾದವನು. ಎಂದು ಒಮ್ಮೆ ಹೊಗಳಿದರೆ ಮತ್ತೊಮ್ಮೆ ಅವನನ್ನು ನಾನೇ ಕೊಲ್ಲಬಹುದಿತ್ತು. ಶತ್ರುಗಳು ಅವನ ಮೇಲೆ ಬಿದ್ದಾಗ ಅವನ ಸಹಾಯಕ್ಕೆ ಯಾರೂ ಬರದಂತಾಗಲಿ, ಅಕಾಲ ಮೃತ್ಯುವಿಗೆ ತುತ್ತಾಗಲಿ, ಹೆಣ ಸಂಸ್ಕಾರ ಕಾಣದೆ ಬೀದಿಯಲ್ಲಿ ಬೀಳಲಿ ನನ್ನ ಶಾಪತಟ್ಟಲಿ ಎನ್ನುತ್ತಾಳೆ.

ಇತ್ತ ತಂಗಿಯನ್ನು ಪುನಃ ಕರೆಸಿ ಹಿಂದಿನ ದಿನ ಹಾಕಿದ ಚಿತೆಗೆ ಪುನಃ ಬೆಂಕಿ ಹಾಕಿಸಿ ತಾವು ಮಲಗುತ್ತಿದ್ದ ದಿಂಬು, ಇತರ ಬಟ್ಟೆಗಳನ್ನು ಹಾಕಿ ಡೈಡೋಳು ಆ ಚಿತೆಗೆ ಏರಿ ಕತ್ತಿಯ ಮೇಲೆ ಬಿದ್ದು ಸಾಯುತ್ತಾಳೆ. ತನ್ನ ಗಂಡನನ್ನು ಕೊಂದವರನ್ನು ಕೊಂದು ಪ್ರತಿಕಾರ ತೀರಿಸಿಕೊಂಡಿದ್ದಳು. ತನ್ನ ಸೋದರನಿಗೆ ಶಿಕ್ಷೆ ಮಾಡಿದ್ದಳು, ಯಾವ ಸುಖಕ್ಕೂ ಕಡಿಮೆ ಇರಲಿಲ್ಲ ಆದರೆ ಆ ಟ್ರೋಜನರ ಈನಿಯಸ್‌ನ ಪ್ರೇಮಕ್ಕೆ, ಕ್ಷಣಿಕ ಸುಖಕ್ಕೆ ಸಿಲುಕಿ ಸಾಯುವ ಸ್ಥಿತಿ ಬಂತಲ್ಲ ಎಂದು ಮರುಗಿ ಚಿತೆಯಲ್ಲಿ ಬೆಂದು ಸಾಯುತ್ತಾಳೆ.

ಅಷ್ಟರಲ್ಲಿ ಅಲ್ಲಿಗೆ ಬಂದ ಇವಳ ತಂಗಿ ಅನಾಳ ಇದರಿಂದ ಅತೀವ ದುಃಖವನ್ನು ಅನುಭವಿಸುತ್ತಾಳೆ. ಇಡೀ ಕಾರ್ಥೇಜ ನಗರವೇ ದುಃಖದಲ್ಲಿ ಗೋಳಿಡುತ್ತದೆ. ಇವಳ ಚಿತೆಯ ಬೆಂಕಿ ಎತ್ತರಕ್ಕೆ ಏರಿದುದನ್ನು ಹಡಗಿನಲ್ಲಿದ್ದ ಈನಿಯಸ್ ನೋಡಿದರೂ, ಇದು ಅವಳ ಸಾವಿನ ಚಿತೆಯೆಂದು ಗುರ್ತಿಸದಾಗುತ್ತಾನೆ. ಇತ್ತ ಈನಿಯಸ್‌ನಿಗೆ ಭಯವಾಗುತ್ತೆ, ಪ್ರಣಯ ಭಗ್ನ ಗೊಂಡ ಹೆಣ್ಣು ಏನು ಮಾಡಲು ಹೇಸುವುದಿಲ್ಲ ಎಂದುಕೊಳ್ಳುತ್ತಾನೆ. ಗಾಳಿ ಬೇರೆದಿಕ್ಕಿಗೆ ಬೀಸಿ ಪುನಃ ಸಿಸಿಲಿ ದ್ವೀಪದ ಕಡೆ ಹಡಗುಗಳು ಸಾಗುತ್ತವ

ಸ್ವರ್ಗದ ಮಹಾರಾಣಿ, ಜೂಪಿಟರ್‌ನ ಪತ್ನಿಯಾದ ನನಗೇ ಸೋಲಾಯಿತೇ? ಆ ಈನಿಯಸ್‌ನೇ ಗೆದ್ದನೇ ಇರಲಿ, ಸ್ವರ್ಗದ ಕಡೆಯಿಂದ ನನಗೆ ಸಹಾಯ ಸಿಗದಿದ್ದರೇನಂತೆ, ನರಕದ ಕಡೆಯಿಂದ ಸಹಾಯ ಬೇಡಿ ಈ ಈನಿಯಸ್‌ನ ವಂಶವನ್ನು ನಾಶಪಡಿಸುತ್ತೇನೆಂದು ಪ್ರತಿಜ್ಞೆಮಾಡುತ್ತಾಳೆ.

ಆದರೆ ದೈವಸಂಕಲ್ಪವಾದ ಈನಿಯಸ್‌ನು ಲ್ಯಾಟಿಯಮ್ ಸಿಂಹಾಸನ ಮತ್ತು ಲ್ಯಾಮಿನಿಯಳನ್ನು ಮದುವೆಯಾಗುವುದನ್ನು ತಡೆಯದಾಗದಿದ್ದರೂ ಅದನ್ನು ವಿಳಂಬವನ್ನಾದರು ಮಾಡಬಹುದು ಎನ್ನುತ್ತಾಳೆ. ಮುಂದೆ ಆ ಟ್ರೋಜನ್ನರನ್ನು ಈ ಲ್ಯಾಟಿನರನ್ನು ಇಬ್ಬರನ್ನೂ ಬೇರು ಸಮೇತ ನಾಶಮಾಡುತ್ತೇನೆ ಎನ್ನುತ್ತಾಳೆ.

ಲ್ಯಾಟಿನ್ ಮತ್ತು ಟ್ರೋಜನರ ರಕ್ತ ಸಂಬಂಧ ಬೆಳೆಸುವ ಮೊದಲು ಎರಡೂ ರಾಜ್ಯದ ಜನರು ಅಪಾರ ರಕ್ತ ಪಾತದಲ್ಲಿ ಮುಳುಗಿ ಏಳಬೇಕು, ಅಪಾರ ನರಬಲಿಯಾಗಬೇಕು ಹಾಗೆ ಮಾಡುತ್ತೇನೆ ಎನ್ನುತ್ತಾಳೆ. ರಾಣಿಯಾದ ಲ್ಯಾಮಿನಿಯೇ ನೀನು ಕೊಡಬೇಕಾದ ವರದಕ್ಷಿಣೆ ಎಂದರೆ ರಕ್ತದ ಕಾಣಿಕೆ ಟ್ರೋಜನರು ಮತ್ತು ಲ್ಯಾಟಿನರ ರಕ್ತಕಾಣಿಕೆ, ನರಬಲಿ ಎನ್ನುತ್ತಾಳೆ.

ಯುದ್ಧದೇವತೆಯಾದ ಬೆಲೋನಾ ಅವಳ ಮದುವೆ ಅಧ್ಯಕ್ಷತೆ ವಹಿಸುತ್ತಾಳೆ. ಅವಳು ಟ್ರಾಯ್ ನಗರವು ಸುಟ್ಟು ಬೂದಿಯಾಗುವ ಕನಸು ಕಂಡಿದ್ದವಳು ಎಂದು ಹೇಳಿ ಹೋಗುತ್ತಾಳೆ. ಪ್ರತೀಕಾರ ತೀರಿಸಿಕೊಳ್ಳುವ ದೇವತೆಯಾದ 'ಅಲೆಕ್ಟೋಳ'ನ್ನು ಉಗ್ರ ನರಕಲೋಕದಿಂದ ಮೇಲೆ ಬರುವಂತೆ ಕರೆದಳು. ಅಲೆಕ್ಟೋಳಿಗಂತು ಯುದ್ಧ, ರಕ್ತಪಾತ, ಸೇಡು, ಕ್ರೂರ ಕರ್ಮಗಳೆಂದರೆ ಅತಿಯಾದ ಪ್ರೀತಿ ಮತ್ತು ಆನಂದ. ಇಂಥವಳ ಬಳಿ ತನಗೆ ಸಹಾಯ ಮಾಡುವಂತೆ ಬೇಡಿಕೊಂಡಳು.

ಅತ್ತ ಲ್ಯಾಟಿನಸ್ ದೊರೆ ತನ್ನ ಮಗಳು ಲ್ಯಾಮಿಯಳನ್ನು ಈನಿಯಸ್‌ನಿಗೆ ಮದುವೆಮಾಡಿ ಕೊಡದಂತೆ ಏನಾದರು ತಂತ್ರ ಮಾಡು ಎನ್ನುತ್ತಾಳೆ. ಅಣ್ಣ– ತಮ್ಮದಿಂರಲ್ಲೆ, ಗಂಡ – ಹೆಂಡಿರಲ್ಲೇ ಜಗಳ ತಂದಿಟ್ಟು ಕೊಲೆಯಲ್ಲಿ ಅಂತ್ಯಗೊಳಿಸುವ ನೀನು ಹೇಗಾದರು ಮಾಡಿ ಮದುವೆಯನ್ನು ತಡೆಯ ಬೇಕೆನ್ನುತ್ತಾಳೆ. ಕೂಡಲೆ ಅಮಾಕ್ಟಳು ಲ್ಯಾಟಿನ್‌ಗೆ ಬಂದು ಹೆಣ್ಣಿನ ತಾಯಿ ಅಮಾಟಳ ಶಯ್ಯಾಗೃಹಕ್ಕೆ ಬಂದು ಅವಳ ತಲೆಗೂದಲೇ ಹಾವಾಗಿ ಆ ಹಾವನ್ನು ಅಮಾಟಳ ಎದೆಗೆ ಎಸೆದಿದ್ದರಿಂದ ಹಾವು ಅವಳ ಎದೆಯ ಸ್ಥನಗಳಿಗೆ ಕಚ್ಚಿ ಅಲ್ಲಿಂದ ಇಡೀ ದೇಹವೇ ಹುಚ್ಚಾಗುವಂತೆ ಮಾಡಿತು.

ಆಗ ಆ ಅಮಾಟಳು ತನ್ನ ಗಂಡನಿಗೆ ಆ ದೇಶಭ್ರಷ್ಟ ಟ್ರೋಜನರಿಗೆ ತನ್ನ ಮಗಳು ಲ್ಯಾಮಿನಿಯಳನ್ನು ಕೊಡ ಬಾರದೆಂದು, ಅವರಿಗೆ ಅನುಕೂಲವಾದ ಗಾಳಿ ಬೀಸಿದರೆ ಅವರು ಇಲ್ಲಿಂದ ಹೊರಟು ಹೋಗುತ್ತಾರೆ. ನಮ್ಮನ್ನು ಬಿಟ್ಟು ನಮ್ಮ ಮಗಳನ್ನು ಹಾರಿಸಿಕೊಂಡು ಹೋಗುತ್ತಾರೆ. ಹೀಗೆ ಅಲ್ಲವೆ ಫ್ರೀಜಿಯನ್ ದೇಶದ ಕುರಿಕಾಯುವವನು ಲೇಸಿಡಿಯನ್ ನಗರಕ್ಕೆ ಬಂದು ಅಲ್ಲಿನ ಲೀಡಾ ರಾಣಿಯ ಮಗಳು 'ಹೆಲೆನ್'ಳ ನ್ನು ಟ್ರಾಯ್‌ನಗರಕ್ಕೆ ಹೊತ್ತುಕೊಂಡು ಹೋದದ್ದು ಎನ್ನುತ್ತಾಳೆ.

ನಿಮ್ಮ ತಂದೆ ನಮ್ಮ ಮಗಳನ್ನು ವಿದೇಶಿಗನೊಬ್ಬನಿಗೆ ಕೊಡಬೇಕೆಂದು ಹೇಳಿದ್ದರೆ ನಮ್ಮ ದೇಶವಲ್ಲದ ಬೇರೆ ಅನೇಕ ದೇಶಗಳಿವೆ. ಆ ದೇಶದ ರಾಜರು ಇವಳನ್ನು ಮದುವೆಯಾಗಲು ಕಾದಿದ್ದಾರೆ ಅವರಾರಿಗಾದರು ಕೊಟ್ಟು ಮದುವೆ ಮಾಡು ಆದರೆ ಆ ಈನಿಯಸ್‌ನಿಗೆ ಮಾತ್ರ ಮದುವೆ ಮಾಡಬೇಡ ಎನ್ನುತ್ತಾಳೆ. ಆದರೆ ಅವಳ ಮಾತಿಗೆ ರಾಜ ಬೆಲೆ ಕೊಡದಿದ್ದಾಗ ಅವಳ ಹುಚ್ಚು ನೆತ್ತಿಗೇರಿ ಬೀದಿ ಬೀದಿಗಳಲ್ಲಿ ಅರಚಾಡಿಕೊಂಡು ಓಡತೊಡಗುತ್ತಾಳೆ. ಆದರೆ ಊರಿನ ಜನರೂ ಅವಳನ್ನೂ ತಿರಸ್ಕಾರದಿಂದ ಕಂಡರು.

ಬ್ಯಾಖಸ್ ದೇವತೆ ತನ್ನ ಮೈಮೇಲೆ ಬಂದಿದೆ ಎನ್ನುವಂತೆ ನಾಟಕಮಾಡಿ ಲ್ಯಾಟಿನ್‌ನ ಸ್ತ್ರೀಯರನ್ನೆಲ್ಲಾ ಒಂದುಗೂಡಿಸಿ ಕಾಡಿನ ದಾರಿಯಲ್ಲಿ ಓಡತೊಡಗುತ್ತಾಳೆ.. ತನ್ನ ಮಗಳು ಲ್ಯಾಮಿನಿಯಳನ್ನು ಹೊತ್ತುಕೊಂಡು ಹೋಗಿ ಕಾಡಿನಲ್ಲಿ ಬಚ್ಚಿಡುತ್ತಾಳೆ. ಈ ಸುದ್ದಿ ಊರಿನ ಹೆಂಗಸರಿಗೆಲ್ಲ ಹಬ್ಬಿ ಅವರೂ ತಲೆಗೂದಲನ್ನು ಬಿಟ್ಟು, ಅರೆಬೆತ್ತಲಾಗಿ ಕುಣಿಯುತ್ತಾ ಆ ಕಡೆಯೇ ಹುಚ್ಚುಹಿಡಿದವರಂತೆ ಹೊರಡುತ್ತಾರೆ. ತನ್ನ ಮಗಳನ್ನು ರೂಟೂಲಿಯನ್ ರಾಜ ಟರ್ನಸನಿಗೆ ಕೊಡಬೇಕೆಂದು ತನ್ನ ಮಗಳಿಗೆ ವಸಗೆ ಶಾಸ್ತ್ರಮಾಡಿದಳು.

ಅಲೆಕ್ಟೋಳು ಇತ್ತ ರೂಟೂಲಿಯನ್‌ಗೆ ಹೋಗಿ ಟರ್ನಸ್‌ನ ಕನಸಿನಲ್ಲಿ ಆ ರಾಣಿಯನ್ನು ನೀನೇ ಮದುವೆಯಾಗಬೇಕೆಂದು ಆಸೆ ಹುಟ್ಟಿಸುತ್ತಾಳೆ. ನಿನಗೆ ಸೇರಬೇಕಾದ ರಾಜ್ಯ, ರಾಣಿ ಲ್ಯಾಮಿನಳು ಟ್ರಾಯ್‌ನ ಈನಿಯಸ್‌ಗೆ ಸೇರುವುದು ಎಷ್ಟು ಸರಿ ಅವಳ ತಂದೆ ಅವಳನ್ನು ನಿನಗೆ ಕೊಡಲು ಒಪ್ಪುತ್ತಿಲ್ಲ ಹಾಗಾಗಿ ಈಗಲೇ ಸೈನ್ಯ ಸಮೇತ ಅವರ ಮೇಲೆ ನುಗ್ಗಿ ಟ್ರೋಜನರ ಹಡಗುಗಳನ್ನು ಸುಟ್ಟುಹಾಕಿ, ಟ್ರೋಜನರನ್ನು ಕೊಂದು ಹಾಕಿರಿ.

ರಾಣಿಯ ತಂದೆ ನಿನಗೆ ಕೊಟ್ಟು ಮದುವೆ ಮಾಡದಿದ್ದರೆ ಆ ತಪ್ಪಿಗೆ ಶಿಕ್ಷೆ ಅನುಭವಿಸಿಯೇ ಅನುಭವಿಸುತ್ತಾನೆ. ಜೊತೆಗೆ ನಿನ್ನ ಯುದ್ಧದ ಪರಾಕ್ರಮವನ್ನು ನೋಡಿಯಾದ ಮೇಲೆಯಾದರು ನಿನಗೆ ಹೆದರಿ ಮಗಳನ್ನು ನಿನಗೆ ಕೊಟ್ಟು ಮದುವೆ ಮಾಡುತ್ತಾನೆ, ಎಂದಾಗ ಟರ್ನಸ್‌ನು ನಗುತ್ತಾ ಹೇ ಮುದುಕಿ ಅದೆಲ್ಲ ನನಗೆ ಗೊತ್ತಿದೆ ನಾನು ಯಾರಿಗೂ ಹೆದರುವ ಅಗತ್ಯವಿಲ್ಲ, ಯುದ್ಧಮಾಡುವುದು ಬಿಡುವುದು ಗಂಡಸರಿಗೆ ಬಿಟ್ಟಿದ್ದು ಹೆಂಗಸಾದ ನೀನು ನಿನ್ನ ಪಾಡಿಗೆ ನೀನಿರು ಎಂದು ಅವಮಾನಿಸುತ್ತಾನೆ.

ಅಷ್ಟೊತ್ತಿಗೆ ಅಲೆಕ್ಟೋಳು ಕೆರಳಿದಳು ಮೈಮೇಲೆ ಬಂದಿತು ಇದರಿಂದ ಅವನು ನಡುಗಿ ಹೋದನು. ದೊಡ್ಡ ಎತ್ತರಕ್ಕೆ ಬೆಳೆದು ಉಗ್ರ ದೇವತೆಯಾದಳು. ಅವಳ ತಲೆಯಲ್ಲಿನ ಕೂದಲು ಬುಸುಗುಟ್ಟುವ ಹಾವುಗಳಾದವು. ಕನಸಿನಿಂದ ಬೆಚ್ಚಿಬಿದ್ದ ಟರ್ನಸನು ಯುದ್ಧಕ್ಕೆ ಸಿದ್ಧಮಾಡಿಕೊಂಡನು. ಟ್ರೋಜನರ ಜೊತೆ ಒಪ್ಪಂದ ಮಾಡಿಕೊಂಡಿರುವ ಲ್ಯಾಟಿನ್ನರ ಮೇಲೆ ಯುದ್ಧಕ್ಕೆ ಹೋಗಬೇಕೆಂದು ದಂಡನಾಯಕನಿಗೆ ಹೇಳಿದನು. ಇಟಲಿಯನ್ನು ರಕ್ಷಿಸಬೇಕಾದರೆ ರೂಟೂಲಿಯನ್ನರು ಆ ಲ್ಯಾಟಿನಸ್ ಮತ್ತು ಟ್ರೋಜನರಿಬ್ಬರನ್ನು ಸದೆಬಡಿಯಬೇಕು ಎನ್ನುತ್ತಾನೆ.

ಇತ್ತ ಟ್ರೋಜನ್ನರು ಯುದ್ಧಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದ್ದುದನ್ನು ಅಲೆಕ್ಟೋ ನೋಡಿದಳು. ಅಸ್ಕೇನಿಯಸ್‌ನು ಯುದ್ಧಕ್ಕೆ ಬೇಟೆ ನಾಯಿಗಳನ್ನು ಸಿದ್ಧಪಡಿಸಿದಾಗ ಕೂಡಲೇ ಅವಳು ಜಿಂಕೆಯ ವಾಸನೆಯನ್ನು ಅವುಗಳಿಗೆ ಹತ್ತಿಸಿದಾಗ ಅವು ಆ ವಾಸನೆಯ ಬೆನ್ನು ಹತ್ತಿದವು.

ಇಲ್ಲಿ ಹೊಸತಂತ್ರ ಮಾಡಿದ ಅವಳು ಸ್ಥಳೀಯ ಗ್ರಾಮಾಂತರ ಜನರಿಗೂ ಟ್ರೋಜನರಿಗೆ ಸಹಜವಾಗಿ ವಿನಾಕಾರಣ ಹೊಡೆದಾಡುವಂತೆ ಉಪಾಯ ರೂಪಿಸಿದ್ದಳು. ಅದೆಂದರೆ ಟಿರ್ಹಸ್‌ನ ಮಗಳು ಸಿಲ್ವಿಯಾಳು ಚಿಕ್ಕಂದಿನಿಂದಲೂ ಒಂದು ಮುದ್ದಾದ ಜಿಂಕೆ ಮರಿ ಯನ್ನು ಸಾಕಿದ್ದಳು. ಅದು ಅವಳ ಪ್ರಾಣಕ್ಕಿಂತ ಹೆಚ್ಚಾಗಿತ್ತು. ಹೀಗಿರುವಾಗ ಅದು ನದಿಯಲ್ಲಿ ಈಜುತ್ತಿರಬೇಕಾದರೆ ಮಾಯಾದೇವತೆ ಎಬ್ಬಿಸಿದ ಜಿಂಕೆಯ ವಾಸನೆ ಹಿಡಿದ ಆ ನಾಯಿಗಳು ಈ ಜಿಂಕೆಯನ್ನು ಬೇಟೆಯಾಡಲು ಬರುತ್ತಿದ್ದವು. ಇದನ್ನು ಕಂಡ ಆ ನಾಯಿಗಳ ಒಡೆಯ ಟ್ರೋಜನ್ನನನ್ನು ಆಸ್ಕೇನಿಯನು ಬಾಣದಿಂದ ಗುರಿಯಿಟ್ಟು ಹೊಡೆದಾಗ ಆ ಬಾಣ ಜಿಂಕೆಗೆ ನಾಟಿ ಅದು ಸಾವು ಬದುಕಿನಿಂದ ಹೋರಾಡಿ ಬಂದು ಅರಮನೆಯ ಸಿಲ್ವಿಯಾಳ ತೊಡೆಯಮೇಲೆ ಪ್ರಾಣಬಿಟ್ಟಿತು.

ಆಗ ಅವಳು ಗೋಳಾಡಲಾರಂಬಿಸಿದಳು ಇದನ್ನು ಕಂಡ ಅವಳ ತಂದೆ ಟಿರ್ಹಸನು ಸ್ಥಳೀಯ ಗ್ರಾಮಾಂತರ ಜನರನ್ನು ಒಟ್ಟುಗೂಡಿಸಿ ವಿದೇಶಿಗರಾದ ಟ್ರಾಯ್‌ನವರ ಮೇಲೆ ದೊಣ್ಣೆ ಮಚ್ಚುಗಳನ್ನಿಡಿದು ಜಗಳಕ್ಕೆ ಸಿದ್ದರಾದರು.

ಟ್ರೋಜನ್ನರು ಅವರ ಮೇಲೆ ಜಗಳವಾಡಲು ಸಿದ್ಧರಾದರು. ಹೀಗಿರುವಾಗ ಟಿರ್ಹಸ್‌ನ ಕಿರಿಯ ಮಗನಿಗೆ ಟ್ರೋಜನ್ ಕಡೆಯಿಂದ ಬಂದ ಬಾಣ ತಾಗಿತು. ತಕ್ಷಣ ಅವನು ಸತ್ತು ಹೋದನು. ಎರಡೂ ಕಡೆ ಯುದ್ಧ ವಿನಾಕಾರಣ ಆರಂಭವಾಗಿ ಅನೇಕ ವೀರರು ಸತ್ತರು. ಸಂಧಾನ ಮಾಡಲು ಬಂದ ಸತ್ಯವಂತನಾದ ಹಿರಿಯನೂ ಸತ್ತುಹೋದನು. ಹೀಗೆ ಪ್ರತೀಕಾರ ದೇವತೆ ಇಟಾಲಿಯನ್ ರಕ್ತವನ್ನು ಟ್ರೋಜನ್ನರ ಮೇಲೆ ಹರಿಸಿ ಇನ್ನೂ ರಕ್ತಪಾತವಾಗುವಂತೆ ಮಾಡುತ್ತೇನೆ ಎನ್ನುತ್ತಾಳೆ.

ಆಗ ಜೂನೋ ದೇವತೆ ಇಷ್ಟು ಸಾಕು ಇನ್ನು ನೀನು ಹೊರಡು ಇನ್ನು ಅವರವರೇ ಯುದ್ಧಮಾಡುತ್ತಾರೆ ಎನ್ನುತ್ತಾಳೆ. ಹೀಗೆ ಜೂನೋ ದೇವತೆಯು ಬೇರೆ ಬೇರೆ ನರಕಲೋಕದ ಶಕ್ತಿಗಳ ಸಹಾಯ ಪಡೆದು ಸೇಡು ತೀರಿಸಿ ಕೊಳ್ಳುತ್ತಿರುತ್ತಾಳೆ.

ಇತ್ತ ಗ್ರಾಮಸ್ಥರೆಲ್ಲ ಸತ್ತ ಹೆಣಗಳನ್ನು ಲ್ಯಾಟಿನ್‌ನ ರಾಜನೆದುರು ಹಾಕಿ ಟ್ರೋಜನ್ನರು ವಿನಾಕಾರಣ ನಮ್ಮವರನ್ನು ಕೊಂದಿದ್ದಾರೆ, ಅಂತಹವರ ಜೊತೆ ಮದುವೆ, ರಕ್ತಸಂಬಂಧ ಏರ್ಪಡಿಸಿದರೆ ಈ ದೇಶಕ್ಕೆ ಏನೇನು ಕಾದಿದೆಯೇ ಎನ್ನುತ್ತಾರೆ. ಅತ್ತ ರಾಣಿಯ ಜೊತೆ ಕಾಡಿಗೆ ಹೋಗಿದ್ದ ಹೆಂಗಸರ ಗಂಡಂದಿರು ಬಂದು ಯುದ್ಧವಾಗಲೇಬೇಕು, ಟ್ರೋಜನ್ನರನ್ನು ಓಡಿಸಲೇಬೇಕೆಂದು ಪ್ರತಿಭಟನೆಯನ್ನು ಮಾಡುತ್ತಾರೆ.

ಆಗ ದೊರೆ ಏನೂ ಮಾಡಲಾಗದೆ ನಿಸ್ಸಹಾಯಕನಾಗಿ ಪ್ರಜೆಗಳಿಗೆ ಹೇಳುತ್ತಾನೆ. 'ನೀವು ಮಾಡುತ್ತಿರುವ ಪಾಪಕಾರ್ಯಕ್ಕೆ ನೀವು ಅಪಾರ ರಕ್ತಬಲಿ ತೆರಬೇಕಾಗುತ್ತದೆ' ಎನ್ನುತ್ತಾನೆ. ಟರ್ನಸ್, ನಿನ್ನ ದೌಷ್ಟಕ್ಕೆ ನಿನಗೂ ತಕ್ಕ ಶಿಕ್ಷೆಯಾಗುತ್ತದೆ ನಾನಾದರೋ ವಯೋ ವೃದ್ಧನಾದುದರಿಂದ ನನಗೀಗ ವಿಶ್ರಾಂತಿ ಬೇಕು ಯುದ್ಧಕ್ಕೆ ಬರಲಾರೆನು ಎಂದು ಅರಮನೆಯಲ್ಲೇ ಸೇರಿಕೊಳ್ಳುತ್ತಾನೆ.

ಇತ್ತ ಇಟಲಿ ಯುದ್ಧಕ್ಕೆ ಸಿದ್ಧವಾಗುತ್ತಿತ್ತು ಕಮ್ಮಾರ ಶಾಲೆಯಲ್ಲಿ ಯುದ್ಧೋಪಕರಣ ಗಳಾದ ಶೀರ್ಷಕ, ಗುರಾಣಿ, ಬಾಣ, ಈಟಿ, ಕವಚಗಳು ಸಿದ್ಧವಾಗುತ್ತಿದ್ದವು. ರೈತರು ತಮ್ಮ ನೇಗಿಲ ಕುಳ, ಕುಡಗೋಲು ಬಿಟ್ಟರು, ಬಿತ್ತನೆ ಕೆಲಸ ಮರೆತರು, ಕತ್ತಿಗಳನ್ನಿಡಿದು ಯುದ್ಧ ಮಾಡಲು ನುಗ್ಗಿದರು.

ಅನೇಕ ವೀರಾದಿ ವೀರರು ಯುದ್ಧ ಭೂಮಿಯತ್ತ ಬರುತ್ತಿದ್ದರು. 'ಕ್ಯಾಮಿಲ' ಎಂಬ ಸ್ತ್ರೀ ಯೋಧೆಯು ಪರಾಕ್ರಮಿಯಾಗಿದ್ದು ಯುದ್ಧಕವಚ ತೊಟ್ಟು ಊರಿನ ಎಲ್ಲಾ ಹೆಂಗಸರು – ಗಂಡಸರು ನಿಬ್ಬೆರಗಾಗುವಂತೆ ಕುದುರೆ ಏರಿ ಮಿಂಚಿನ ವೇಗದಿಂದ ಬರುತ್ತಿದ್ದಳು. ಇವರೆಲ್ಲ ಟರ್ನರಸ್‌ನ ಕಡೆಯವರಾಗಿದ್ದರು. ಹೀಗೆ ಟರ್ನಸ್ ಮತ್ತು ಲ್ಯಾಟಿಯಮ್ ಎರಡು ರಾಜ್ಯ ಗಳಲ್ಲೂ ಯುದ್ಧ ಸಿದ್ಧತೆಗಳಾಗಿದ್ದು ಇವೆರಡು ನಿರಾಶ್ರಿತರ ಮೇಲಿನ ಟ್ರೋಜನರ ವಿರುದ್ಧವೇ ಆಗಿತ್ತು. ಆದರೆ ಟರ್ನಸ್‌ನ ಸೈನ್ಯವು ಇತ್ತ ಲ್ಯಾಟಿಯಮ್ ಮತ್ತು ಟ್ರೋಜನ್ ಎರಡನ್ನು ಉರುಳಿಸಲು ಸಿದ್ಧವಾಗಿತ್ತು. ಆದರೆ ಲ್ಯಾಟಿಯಮ್‌ರಿಗೆ ಇದು ತಿಳಿದಿರಲಿಲ್ಲ ಕೇವಲ ಈನಿಯಸ್ ಕಡೆಯವರನ್ನು ಮಾತ್ರ ಓಡಿಸುವುದು ಅಂದು ಕೊಂಡಿದ್ದರು. ನಿಜಸ್ಥಿತಿ ಅವರಿಗೆ ತಿಳಿದಿರಲಿಲ್ಲ.

ಈ ನಡುವೆ ಈನಿಯಸ್‌ನಿಗೆ ಅನಿರೀಕ್ಷಿತವಾಗಿ ಬಂದೊದಗಿದ ಅಪಾಯದ ಬಗ್ಗೆ ಚಿಂತೆಯಾಯಿತು. ಈ ಚಿಂತೆಯಲ್ಲೇ ರಾತ್ರಿ ಇಡೀ ಅನ್ಯಮನಸ್ಕನಾಗಿ ಟೈಬರ್ ನದೀ ತೀರದಲ್ಲಿ ಮರಳ ಮೇಲೆ ಮಲಗಿದನು. ಬೆಳಿಗ್ಗೆಗೆ ಯುದ್ಧಾರಂಭ ಏನು ಮಾಡುವುದು? ಹೀಗಿರುವಾಗ ಟೈಬರ್ ನದಿ ದೇವತೆ ಅವನ ಕನಸಿನಲ್ಲಿ ಬಂದಳು. ಅವನನ್ನು ಸಮಾಧಾನ ಮಾಡಿ ಎಷ್ಟೇ ಕಷ್ಟ ಬಂದರು ಇಲ್ಲಿಂದ ಹಿಂದಿರುಗಬೇಡ ನೀನು ತಂದ ನಿನ್ನ ಮನೆದೇವರ ವಿಗ್ರಹಗಳಿಗೆ ಇದೇ ಸುಭದ್ರವಾದ ನೆಲೆ ಇಟಲಿಯಲ್ಲಿ ಹೊಸರಾಜ್ಯಕಟ್ಟಲೇಬೇಕು.

ಇದುವರೆಗೂ ಸ್ವರ್ಗದ ದೇವತೆಗಳಿಗೆ ಇದ್ದ ಕೋಪ ಈಗ ಶಾಂತವಾಗಿದೆ. ನಾನು ಹೇಳುತ್ತಿರುವುದು ಸತ್ಯ. ಇಲ್ಲೇ ಮುಂದೆ ಸಮುದ್ರ ತೀರದಲ್ಲಿ ಆಗತಾನೆ ಮರಿ ಹಾಕಿದ ತಾಯಿ ಹಂದಿ ತನ್ನ ಮೂವತ್ತು ಮರಿಗಳಿಗೆ ಹಾಲುಣಿಸುತ್ತಿರುತ್ತದೆ ಅವೆಲ್ಲವೂ ಬಿಳಿಯ ಬಣ್ಣದವು. ಅದೇ ಗುರುತು ಅದೇ ಜಾಗದಲ್ಲಿ ನೀನು ಹೊಸ ಊರು ಕಟ್ಟಬೇಕು ಅಲ್ಲಿಗೆ ನಿನ್ನ ಕಷ್ಟಗಳೆಲ್ಲ ಮುಗಿಯುತ್ತವೆ ಎನ್ನುತ್ತದೆ.

ಕೂಡಲೆ ಎಚ್ಚರವಾದ ಈನಿಯಸ್‌ನು ಟೈಬರ್ ನದಿಯಲ್ಲಿ ಪ್ರಯಾಣ ಬೆಳೆಸುತ್ತಾನೆ. ಮುಂದೆ ಆ ಹಂದಿ ಮತ್ತು ಮರಿಗಳು ಕಾಣಿಸಿಕೊಂಡವು ಕೂಡಲೇ ಅವುಗಳನ್ನೆಲ್ಲ ಹಿಡಿದು ಬಲಿಗಂಬದ ಬಳಿ ತಂದು ಜೂನೋ ದೇವತೆಗೆ ಬಲಿಗೊಟ್ಟು ಇನ್ನು ಮುಂದೆ ತನ್ನ ಮೇಲೆ ದ್ವೇಷ ಸಾಧಿಸಬಾರದೆಂದು ಬೇಡಿಕೊಂಡನು. ಆಗ ನದಿಯ ಅಲೆಗಳು ಕಡಿಮೆಯಾಗಿ ದೋಣಿ ಸರಾಗವಾಗಿ ಸಾಗಿತು.

ಮುಂದೆ ಆರ್ಡೆಡಿಯನರ್ ದೊರೆ ಇವಾನ್ಡನರನು ತಮ್ಮೂರಿನ ವಾರ್ಷಿಕ ಪೂಜೆಯಲ್ಲಿ ತೊಡಗಿದ್ದನು. ದೂರದಿಂದ ಬರುವ ಈನಿಯಸ್ ಪಡೆಯನ್ನು ಕಂಡು ಸ್ನೇಹಿತರೆಂದು ತಿಳಿದು ಅವರಿಗೆ ಸ್ವಾಗತ ಕೋರಿದನು. ನಮ್ಮ ಯುದ್ಧವೇನಿದ್ದರು ಲ್ಯಾಟಿನ್ನರ ಮೇಲೆ ನಾವು ಅವರಲ್ಲಿ ಆಶ್ರಯ ಬೇಡಿ ಹೋದರೆ ಅವರು ನಮ್ಮನ್ನು ತಿರಸ್ಕರಿಸಿ ನಮ್ಮ ಮೇಲೆ ಯುದ್ಧ ಹೂಡಿದ್ದಾನೆ. ನಾವೀಗ ದೊರೆ ಇವಾನ್ಡನರನ್ನು ಹುಡಿಕಿಕೊಂಡು ಬಂದಿದ್ದೇವೆ ಅವನ ಸಹಾಯ ಕೋರಿ ಬಂದಿದ್ದೇವೆ ಎನ್ನುತ್ತಾರೆ.

ಆಗ ಇವಾನ್ಡನು ಈನಿಯಸ್‌ನನ್ನು ಕಂಡು ಅವನ ತಂದೆ ಅಂಕೈಸೀಸನನ್ನೇ ಕಂಡಷ್ಟು ಸಂತೋಷವಾಯಿತೆನ್ನುತ್ತಾನೆ. ನಿಮಗೆ

ತೊಂದರೆ ಕೊಡುತ್ತಿರುವವರೇ ನಮಗೂ ತೊಂದರೆ ಕೊಡುತ್ತಿದ್ದಾರೆ, ನಿಮ್ಮೊಟ್ಟಿಗೆ ನಾವಿರುತ್ತೇವೆ ಎನ್ನುತ್ತಾರೆ. ಮುಂದೆ ಗೂಳಿಯನ್ನು ಸುಟ್ಟು ಮಾಂಸದ ಅಡುಗೆ, ರೊಟ್ಟಿಯನ್ನು, ಮಧ್ಯವನ್ನು ನೀಡುತ್ತಾರೆ. ಮುಂದೆ ಬಲಿಗಂಬದ ಧಾರ್ಮಿಕ ಆಚರಣೆಯಲ್ಲಿ ತೊಡಗುತ್ತಾರೆ. ಈ ಪ್ರಾಣಿ ಬಲಿಯು ಮೂಢ ನಂಬಿಕೆಯಿಂದಾಗಲಿ ಅಥವಾ ದೇವತೆಗಳ ಮೇಲಿನ ಅವಿಶ್ವಾಸದಿಂದಾಗಲೀ ಮಾಡುತ್ತಿಲ್ಲ ನಮ್ಮ ಸ್ವಇಚ್ಛೆಯಿಂದ ಮಾಡುತ್ತಿದ್ದೇವೆ ಎನ್ನುತ್ತಾರೆ.

ನರಭಕ್ಷಕನಾದ ರಾಕ್ಷಸನೊಬ್ಬ ಜನರನ್ನೆಲ್ಲ ತಿಂದುತೇಗುತ್ತಿದ್ದ ಹೀಗಿರುವಾಗ ಹರ್ಕ್ಯುಲೀಸ್‌ನು ಅವನ ಗುಹೆಗೆ ಹೋಗಿ ಆ ರಾಕ್ಷಸನನ್ನು ಕೊಂದು ತನ್ನ ಜಾನುವಾರುಗಳನ್ನು ಬಿಡಿಸಿಕೊಂಡು ಬಂದ ಇದರಿಂದ ನಮ್ಮ ಪ್ರಾಣರಕ್ಷಣೆಯೂ ಆಯಿತು ಆ ನೆನಪಿಗಾಗಿ ಭಕ್ತಿಪೂರ್ವಕವಾಗಿ ಈ ಪ್ರಾಣಿಬಲಿ, ಧಾರ್ಮಿಕ ಹಬ್ಬವನ್ನು ಆಚರಿಸುತ್ತಿದ್ದೇವೆ ಎಂದನು. ಹೀಗೆ ಇಲ್ಲಿ ಧಾರ್ಮಿಕ ಹಬ್ಬ ಮುಗಿದ ನಂತರ ಈನಿಯಸ್‌ನನ್ನು ತನ್ನ ಮನೆಗೆ ಕರೆದುಕೊಂಡು ಹೋದನು.

ಹೋಗುವ ದಾರಿಯಲ್ಲಿ ಊರನ್ನೆಲ್ಲ ಪರಿಚಯಿಸುತ್ತಿದ್ದನು. ಹಿಂದೆ ಈ ನೆಲದಲ್ಲಿ ಹೊಲ ಉಳುವುದಾಗಲೀ, ಬೆಳೆ ಬೆಳೆಯುವುದಾಗಲೀ ಗೊತ್ತಿರಲಿಲ್ಲ. ಕಾಡಿನ ಮರಗಳಲ್ಲಿ ಧಾರಾಳವಾಗಿ ಬಿಡುತ್ತಿದ್ದ ಹಣ್ಣು–ಹಂಪಲುಗಳನ್ನು, ಬೇಟೆ ಮಾಡಿ ವನ್ಯ ಮೃಗಗಳ ಮಾಂಸವನ್ನು ತಿಂದು ಬದುಕುತ್ತಿದ್ದರ

ಈ ಪ್ರದೇಶದ ಮೊದಲ ನಾಯಕ ಸೇಟರ್ನ್ ದೇವತೆ. ಜ್ಯೂಪಿಟರ್ ದೇವತೆಯು ಸ್ವರ್ಗ ಲೋಕದ ಸಿಂಹಾಸನ ಇವನಿಂದ ಕಿತ್ತುಕೊಂಡು ಅವನ ತಂದೆಯಾದ ಸೇಟರ್ನ್‌ನನ್ನು ಗಡಿಪಾರು ಮಾಡಿದ ಮೇಲೆ ಇಲ್ಲಿ ಬಂದು ನೆಲೆಸಿದನೆನ್ನುತ್ತಾನೆ.

ಆಗ ಸೇಟರ್ನ್‌ನು ಗುಡ್ಡ ಗಾಡಿನಲ್ಲಿ ಚದುರಿ ಹೋಗಿದ್ದ ಜನರೆಲ್ಲ ಒಟ್ಟು ಗೂಡಿಸಿ ಅವರಿಗೆ ವಿದ್ಯಾ ಬುದ್ಧಿ ಕಲಿಸಿ, ಅವರ ರಕ್ಷಣೆಗೆ ಕಾನೂನುಗಳನ್ನು ರಚಿಸಿಕೊಟ್ಟು ಈ ಪ್ರದೇಶಕ್ಕೆ ಲ್ಯಾಟಿಯಮ್ ಎಂದು ಹೆಸರಿಟ್ಟನು. ಅವನ ಆಳ್ವಿಕೆಯ ಕಾಲ 'ಸುವರ್ಣಯುಗ' ವಾಗಿತ್ತು. ಜನಜೀವನ ಸುಖ ಸಮೃದ್ಧಿಯಿಂದ ಪ್ರಶಾಂತವಾಗಿತ್ತು ಎನ್ನುತ್ತಾನೆ.

ನಂತರದ ದಿನಗಳಲ್ಲಿ ಜನರಿಗೆ ಆಸೆ ಜಾಸ್ತಿಯಾಗಿ ಆಸ್ತಿ ಐಶ್ವರ್ಯಗಳ ವ್ಯಾಮೋಹ ಹೆಚ್ಚಾಗಿ ಅದಕ್ಕಾಗಿ ಯುದ್ಧಗಳು ಆರಂಭವಾದವು, ಪರಸ್ಪರ ಕೊಲೆಗಳು ಆರಂಭವಾದವು ಎನ್ನುತ್ತಾನೆ.

ಹೀಗೆ ಮಾತ ನಾಡುತ್ತಿರಬೇಕಾದರೆ ಟೈಬರ್ ನದಿಯ ಪಕ್ಕದಲ್ಲೇ ಇವಾಂನ್ಡರನ ಗುಡಿಸಲ ಮನೆ ಸಿಕ್ಕಿತು. ಅದರ ಸುತ್ತ ದನಕರುಗಳನ್ನು ಸಾಕಿದ್ದರು. ಜೊತೆಗೆ ಈನಿಯಸ್‌ನಿಗೆ "ಐಶ್ವರ್ಯವನ್ನು ತಿರಸ್ಕಾರದಿಂದ ಕಂಡು, ದೇವತೆಗಳಿಗೆ ಮೆಚ್ಚಿಗೆಯಾಗುವಂತೆ ನಮ್ರತೆಯಿಂದ ಬಾಳುವುದನ್ನು ಕಲಿ", ಎಂದು ಹಿತವಚನವನ್ನು ಹೇಳುತ್ತಾನೆ. ಮತ್ತು ತಮ್ಮ ಸಣ್ಣ ಸೈನ್ಯದ ಜೊತೆ ಪಕ್ಕದಲ್ಲಿ 'ಅಗಿಲ' ಎಂಬ ನಗರದ ಜನ ಯುದ್ಧದಲ್ಲಿ ತುಂಬಾ ಪರಿಣಿತರಿದ್ದಾರೆ, ಅವರನ್ನು ನಿನ್ನ ಜೊತೆ ಸೇರಿಸಿಕೋ ಎಂದನು.

ಯಾಕೆಂದರೆ ಹಿಂದೆ ಇಲ್ಲಿದ್ದ ಮೆಜೆಂಟಿಯಸ್ ಎಂಬ ಕ್ರೂರಿ, ದುಷ್ಟರಾಜನು ಜನರನ್ನು ಜೀವಂತವಾಗಿ ಚಿತ್ರಹಿಂಸೆಕೊಟ್ಟು ಕೊಲ್ಲುತ್ತಿದ್ದನು. ಆ ಊರಿನ ಜನರೆಲ್ಲ ದಂಗೆಯೆದ್ದು, ಅವನ ದೌರ್ಜನ್ಯವನ್ನು ಮಟ್ಟಹಾಕಲು ಅರಮನೆಗೆ ಮುತ್ತಿಗೆ ಹಾಕಿದರು. ಅವನು ಓಡಿಹೋಗಿ ರೂಟಲಿಯನ್ನರ ರಾಜ್ಯದಲ್ಲಿ ಟರ್ನಸನ ಆಶ್ರಯದಲ್ಲಿದ್ದಾನೆ.

ಈ ಜನ ಅಲ್ಲಿಗೂ ಹೋಗಿ ಮೆಜೆಂಟಿಯಸ್‌ನನ್ನು ಒಪ್ಪಿಸದಿದ್ದರೆ ಯುದ್ಧ ಮಾಡುವುದಾಗಿ ಹೇಳಿದ್ದಾರೆ. ಹಾಗಾಗಿ ಅವರೂ ನಿಮ್ಮ ಶತ್ರುಗಳಾದ ಟರ್ನಸನ ಮೇಲೆ ಯುದ್ಧ ಮಾಡಲು ಕಾದು ಕುಳಿತಿದ್ದಾರೆ.

ಆದರೆ ಅವರಿಗೆ ಸರಿಯಾಗಿ ದಂಡನಾಯಕನಿಲ್ಲ ದೇವತೆಯ ಆಜ್ಞೆಯಂತೆ ವಿದೇಶದಿಂದ ಬರುವ ವೀರನೊಬ್ಬನು ಇವರ ಸಹಾಯಕ್ಕೆ ಬಂದ ಮೇಲೆ ಯುದ್ಧ ಮಾಡುವುದೆಂದು ಕಾದು ಕುಳಿತಿದ್ದಾರೆ. ನೀನು ಅವರ ನಾಯಕನಾಗು ಎಂದು ಸಲಹೆ ನೀಡುತ್ತಾನೆ.